# ವಿಕಿಪೀಡಿಯ Vs ಬ್ರಿಟಾನಿಕ ವಿಶ್ವಕೋಶ : ವಿಜ್ಞಾನಿಗಳ ಒಂದು ವಿವಾದ

ವಿಕಿಪೀಡಿಯ (http://en.wikipedia.org) ಬಗೆಗಿನ ಮಾಹಿತಿ ಮತ್ತು ಚರ್ಚೆ ಹೆಚ್ಚುತ್ತಿರುವಾಗಲೆ ಅಂತರರಾಷ್ಟ್ರಿಯ ಮಟ್ಟದಲ್ಲಿ ವಿಜ್ಞಾನಿಗಳು ಹೊಸದೊಂದು ವಿವಾದ ಹುಟ್ಟಿ ಹಾಕಿದ್ದಾರೆ. ಪಾರಂಪರಿಕವಾಗಿ, ತಜ್ಞ ವಿದ್ವಾಂಸರು ಆಹ್ವಾನದ ಮೇರೆಗೆ ಬರೆದು ಸಹಪಾಠಿಗಳ ಪರಿಷ್ಕರಣೆ ಮತ್ತು ಮೌಲ್ಯಮಾಪನಕ್ಕೆ ಒಳಪಡಿಸಿದ ಲೇಖನಗಳನ್ನು ವಿಶ್ವಕೋಶಗಳು ಪ್ರಕಟಿಸಿ ಗುಣಮಟ್ಟ ಕಾಯ್ದುಕೊಳ್ಳುತ್ತವೆ. ಆದರೆ ವಿಕಿಪೀಡಿಯದಲ್ಲಿ ಸಾಮಾನ್ಯರೇ ಬರೆಯುತ್ತಾ, ಓದುತ್ತಾ, ಪರಿಷ್ಕರಿಸುತ್ತಾ ಲೇಖನಗಳು ಪಕ್ವತೆ ಪಡೆಯುತ್ತಿವೆ. ಪ್ರತಿಷ್ಠಿತ ವಿಶ್ವಕೋಶಗಳಿಗೆ ಹೋಲಿಸಿದರೆ ವಿಕಿಪೀಡಿಯದ ಮಾಹಿತಿ ಎಷ್ಟು ಪೂರ್ಣ, ಖಚಿತ ಮತ್ತು ವಿಶ್ವಾಸಾರ್ಹ ಎಂಬ ಅನುಮಾನ ಸಹಜ. ಇಂಟರ್‌ನೆಟ್ ಉಪಯೋಗಿಸುವವರ ಸಂಖ್ಯೆಯಲ್ಲಿ 37ನೇ ರ್‍ಯಾಂಕ್ ಪಡೆದು, 45,000 ನೋಂದಾಯಿತ ಸದಸ್ಯರು, ಸುಮಾರು 200 ಭಾಷೆಗಳ 15 ಲಕ್ಷ ಲೇಖನಗಳು ಮತ್ತು 40 ಲಕ್ಷ ಮಾಹಿತಿ ತುಣುಕುಗಳನ್ನು (ಯಾವುದೇ ಮುದ್ರಿತ ವಿಶ್ವಕೋಶಕ್ಕಿಂತ 12 ಪಟ್ಟು ಹೆಚ್ಚು ಮಾಹಿತಿ) ಹೊಂದಿರುವ ಹಾಗೂ New York Times, CNN ಇತ್ಯಾದಿ ಪ್ರತಿಷ್ಠಿತ ಮಾಹಿತಿ ತಾಣಗಳಿಗಿಂತ ಇಂಟರ್‌ನೆಟ್ ಬಳಕೆದಾರಾರು ಪ್ರತಿನಿತ್ಯ ಹೆಚ್ಚು ಬೇಟಿ ನೀಡುವ, ಜಾಗತಿಕ ಮಟ್ಟದಲ್ಲಿ ಪ್ರಪಂಚದ ಜ್ಞಾನವನ್ನೆಲ್ಲ ಪ್ರಜಾಪ್ರಭುತ್ವ ತಳಹದಿಯ ಮೇಲೆ ಓದುಗರ ಸಹಭಾಗಿತ್ವದಲ್ಲಿ ಮುಕ್ತವಾಗಿಸುವ ವಿಕಿಪೀಡಿಯಾವನ್ನು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಲೇಖನಗಳ ಮಟ್ಟಿಗೆ ಪ್ರತಿಷ್ಠಿತ ಬ್ರಿಟಾನಿಯಾ ವಿಶ್ವಕೋಶಕ್ಕೆ ಹೋಲಿಸುವ ಸಾಹಸಕ್ಕೆ ಕೈ ಹಾಕಿದ್ದರಿಂದ ಅಂತರರಾಷ್ಟ್ರೀಯ ವಿಜ್ಞಾನ ಪತ್ರಿಕೆ 'ನೇಚರ್' ಮತ್ತು 'ಬ್ರಿಟಾನಿಕ' ನಡುವೆ ಒಂದು ಕದನವೇ ನಡೆದಿದೆ.

wiki ಎಂಬುದು ಗ್ರಾಹಕರು web browser ಬಳಸಿ ಸುಲಭದಲ್ಲಿ ವೆಬ್ ತಾಣಗಳಿಗೆ ಪುಟಗಳನ್ನು ಸೇರಿಸುವ ಮತ್ತು ಪರಿಷ್ಕರಿಸುವ ವ್ಯವಸ್ಥೆ ಅಥವ ಸರಳೀಕರಿಸಿದ online ದತ್ತಾಂಶ. ಕನ್ನಡದಲ್ಲೂ ಒಂದು ವಿಕಿಪೀಡಿಯ (http://kn.wikipedia.org), ಬಹು-ಭಾಷಾ ವಿಕಿಪೀಡಿಯಾದ ಭಾಗವಾಗಿ ಇಂಟರ್‌ನೆಟ್‌ನಲ್ಲಿದೆ. ವಿಕಿಪೀಡಿಯಾಗಳಿಗೆ ಲೇಖನ ಬರೆಯುವ ನಿಗದಿತ ಲೇಖಕರಾಗಲಿ, ಸಂಬಳ ಪಡೆದು ಕಾರ್ಯ ನಡೆಸುವ ನೌಕರರಾಗಲಿ ಇಲ್ಲ. ಅಷ್ಟೇ ಏಕೆ ಮುಖ್ಯ ಸಂಪಾದಕರೂ ಇಲ್ಲ. Wikimedia Foundation ಆರಂಭಿಸಿ ತನ್ನ ತಾಣದಲ್ಲಿ ಪೋಷಿಸುತ್ತಿರುವ ವಿಕಿಪೀಡಿಯ ವಿಶ್ವಾದ್ಯಂತ ಸಾವಿರಾರು ಓದುಗ-ಸ್ವಯಂಸೇವಕರು ಬರೆದು, ಪ್ರಕಟಿಸಿ, ತಿದ್ದಿದ ಈ ವಿಶ್ವಕೋಶ ಮತ್ತಿತರ wiki ಪರಾಮರ್ಶನ ಗ್ರಂಥಗಳ ಒಂದು ಬೃಹತ್ ಸಮೂಹ ಇಂಟರ್‌ನೆಟ್‌ನಲ್ಲಿ ನಿತ್ಯ ಬೆಳೆಯುತ್ತ ಪುಕ್ಕಟೆ ಲಭ್ಯವಿದೆ.

'ನೇಚರ್' ಪತ್ರಿಕೆ 50 ಜೊತೆ ವಿಜ್ಞಾನ ಲೇಖನಗಳನ್ನು ವಿಕಿಪೀಡಿಯಾ ಮತ್ತು 'ಬ್ರಿಟಾನಿಕಾ' ಆನ್‌ಲೈನ್‌ಗಳೆರಡರಿಂದಲೂ ಆರಿಸಿ (ಅವು ಯಾವ ವಿಶ್ವಕೋಶದಿಂದ ಪಡೆದವು ಎಂಬುದನ್ನು ಗುಪ್ತವಾಗಿರಿಸಿ) ತಪ್ಪುಗಳನ್ನು ಕಂಡುಹಿಡಿದು, ಹೋಲಿಸಿ, ಮೌಲ್ಯಮಾಪನಮಾಡುವಂತೆ ವಿದ್ವಾಂಸರುಗಳನ್ನು ಕೋರಿ ಒಂದು ಅಧ್ಯಯನ ನಡೆಸಿತು. ದೊರೆತ 43 ಜೊತೆ ಲೇಖನಗಳ ಬಳಸಲರ್ಹವಾದ ಮೌಲ್ಯಮಾಪನಗಳ ಪೈಕಿ ವಿಕಿಪೀಡಿಯಾದಲ್ಲಿ 162 ಮತ್ತು ಬ್ರಿಟಾನಿಕ ವಿಶ್ವಕೋಶದಲ್ಲಿ 123 ತಪ್ಪುಗಳು (ತಪ್ಪು ಮಾಹಿತಿ, ಬಿಟ್ಟುಹೋದ ಮಾಹಿತಿ ಮತ್ತು ದಾರಿತಪ್ಪಿಸುವಂತಹ ಮಾಹಿತಿಗಳು) ಕಂಡುಬಂದವು. ಎರಡರಲ್ಲೂ ತಲಾ ನಾಲ್ಕು ಗಂಭೀರ ದೋಷಗಳಿದ್ದವು. ಈ ಅಧ್ಯಯನದ ಫಲಿತಾಂಶವನ್ನು ಸಂಪಾದಕೀಯದೊಂದಿಗೆ ಪ್ರಕಟಿಸಿ (ಡಿಸಂಬರ್ 15, 2005), ಬ್ರಿಟಾನಿಕ ವಿಶ್ವಕೋಶದಲ್ಲಿ ಸಾಕಷ್ಟು ತಪ್ಪುಗಳಿವೆ, ವಿಕಿಪೀಡಿಯಾದ 13,000 ಸ್ವಯಂಸೇವಕ-ಹವ್ಯಾಸಿ ಲೇಖಕರ ಲೇಖನಗಳಲ್ಲಿ ಬ್ರಿಟಾನಿಕಾಗಿಂತ ಪ್ರತಿಶತ 30 ರಷ್ಟು ಮಾತ್ರ ಅಧಿಕ ತಪ್ಪುಗಳಿವೆ ಮತ್ತು ವಿಕಿಪೀಡಿಯಾದ ವಿಜ್ಞಾನ ಲೇಖನಗಳ ಮಾಹಿತಿ ಸಾಕಷ್ಟು ನಿಖರವಾಗಿವೆ, ವಿಕಿಪೀಡಿಯಾ ಬ್ರಿಟಾನಿಕಾದಷ್ಟೇ ಒಳ್ಳೆಯ ನಂಬಲರ್ಹ ಮಾಹಿತಿಮೂಲ ಎಂದು ತಿಳಿಸಿ ಫಲಿತಾಂಶವನ್ನು ಇಂಟರ್‌ನೆಟ್ ಮತ್ತಿತರ ಮಾಧ್ಯಮಗಳಲ್ಲಿ ಪ್ರಸಾರಮಾಡಿತು. ವಿಕಿಪೀಡಿಯಾಕ್ಕೆ ಲೇಖನಗಳನ್ನು ಬರೆಯುವ ವಿಜ್ಞಾನಿಗಳು ಬಹಳ ಕಡಿಮೆ. ನೇಚರ್ ಲೇಖಕರಲ್ಲಿ ಪ್ರತಿಶತ 70 ಮಂದಿ ವಿಕಿಪೀಡಿಯಾ ಬಗ್ಗೆ ತಿಳಿದಿದ್ದಾರೆ, ಪ್ರತಿಶತ 17 ಮಂದಿ ವಾರಕ್ಕೊಮ್ಮೆಯಾದರೂ ವಿಕಿಪೀಡಿಯಾ ಬಳಸುತ್ತಾರೆ ಮತ್ತು ಪ್ರತಿಶತ ಹತ್ತಕ್ಕಿಂತ ಕಡಿಮೆ ವಿಜ್ಞಾನಿಗಳು ವಿಕಿಪೀಡಿಯಾ ಲೇಖನಗಳ ಪರಿಷ್ಕರಣೆಯಲ್ಲಿ ಭಾಗಿಯಾಗಿದ್ದಾರೆ. ವಿಜ್ಞಾನಿಗಳಿಗೆ ವಿಕಿಪೀಡಿಯಾ ಬೆಳವಣಿಗೆಯಲ್ಲಿ ಭಾಗಿಯಾಗುವಂತೆ, ದೋಷಗಳನ್ನು ಪರಿಹರಿಸಲು ನೆರವಾಗುವಂತೆ ನೇಚರ್ ಕರೆ ನೀಡಿದ್ದು ಒಂದು ವಿಶೇಷ. ಸುಮಾರು ಎರಡು ವರ್ಷಗಳ ಹಿಂದೆಯೇ (2004) ಫ್ರೀಡಂ ಆಂಡ್ ಥಿಂಕರ್ ಎಂಬ ಎಡ್ ಫ್ಲೆಲ್ಟನ್ ಅವರ ಬ್ಲಾಗ್‌ನಲ್ಲಿ ವಿಕಿಪೀಡಿಯಾವನ್ನು ಆನ್ ಲೈನ್ ಬ್ರಿಟಾನಿಕಾಗೆ ಹೋಲಿಸಿ ವಿಕಿಪೀಡಿಯಾ ಹೆಚ್ಚು ಮಾಹಿತಿ ಹಾಗೂ ಪ್ರಚಲಿತವಿರುವ ಇತ್ತೀಚಿನ ಮಾಹಿತಿ ಹೊಂದಿರುವುದೊಂದು ವಿಶೇಷವೆಂದು ತಿಳಿಸಿದ್ದರು.

ಇಲ್ಲಿ ಗಮನಿಸಬಹುದಾದ ಅಂಶವೆಂದರೆ ಇಂಗ್ಲೀಷ್ ವಿಕಿಪೀಡಿಯಾದಲ್ಲಿ ಬ್ರಿಟಾನಿಕಾ ಲೇಖನಗಳಿಗಿಂತ ಸಾಕಷ್ಟು ಉದ್ದನೆಯ 10 ಲಕ್ಷ ಲೇಖನಗಳಿದ್ದು, ಅವು ಇಂಟರ್‌ನೆಟ್‌ನಲ್ಲಿ ಪುಕ್ಕಟೆ ಲಭ್ಯವಿದೆ. ಬ್ರಿಟಾನಿಕ ವಿಶ್ವಕೋಶದಲ್ಲಿ ಕೇವಲ 1,24,000 ಲೇಖನಗಳಿದ್ದು, 32 ಸಂಪುಟದ ಮುದ್ರಿತ ಕೋಶಕ್ಕೆ US$ 1654, ಆನ್‌ಲೈನ್ ಆವೃತ್ತಿಗೆ ವರ್ಷವೊಂದಕ್ಕೆ US$ 85 ಮತ್ತು ಇತ್ತೀಚಿನ CD/DVD ROM

ಆವೃತ್ತಿಗೆ US$ 50 ತೆರಬೇಕು. ವಿಕಿಪೀಡಿಯಾ ಆರಂಭಗೊಂಡಂದಿನಿಂದಲೂ ಈ ಆನ್‌ಲೈನ್ ಮುಕ್ತ ವಿಶ್ವಕೋಶದ ಉಪಯುಕ್ತತೆಯನ್ನು ಪ್ರಶ್ನಿಸಿ, ತಪ್ಪುಗಳನ್ನು ಎತ್ತಿ ತೋರಿಸಿ ಲೇಖನಗಳ ಗುಣಮಟ್ಟ ಕಾಯ್ದುಕೊಳ್ಳುವ ಅಧಿಕೃತತೆ ಇಲ್ಲ, ಮಾಹಿತಿ ನಂಬಲರ್ಹವಲ್ಲ, ಇದು ಪರಾಮರ್ಶನ ಗ್ರಂಥವೇ ಅಲ್ಲ, ಪೂರ್ವಗ್ರಹಪೀಡಿತ ಬರಹಗಳಿವೆ, ದಿನೇದಿನೆ ಹೆಚ್ಚುತ್ತಿರುವ spam ಗಳನ್ನು ಶುದ್ಧೀಕರಿಸುವುದು ಕಷ್ಟವಾಗುತ್ತಲಿದೆ, ಲೇಖನದಿಂದ ಲೇಖನಕ್ಕೆ ಗಣನೀಯ ಗುಣಮಟ್ಟದ ಬದಲಾವಣೆ ಇದೆ, ಇತರ ಇಂಟರ್‌ನೆಟ್ ಸಾಮೂಹಿಕ ಪ್ರಯತ್ನಗಳಾದ usenet ಮತ್ತು ಮುಕ್ತ ಡಿರೆಕ್ಟರಿ ಯೋಜನೆಗಳಂತೆ ವಿಕಿಪೀಡಿಯ ಕೂಡ 5 ವರ್ಷಗಳಲ್ಲಿ spamers ಮತ್ತು ಜಾಹಿರಾತುದಾರರಿಂದಾಗಿ ನಿಸ್ತೇಜವಾಗಿ ಮುರಿದು ಬೀಳಲಿದೆ, ಇತ್ಯಾದಿ ಊಹೆ, ದೋಷ, ಆರೋಪಗಳನ್ನು ಸಾಂಪ್ರದಾಯಿಕ ಪ್ರಕಾಶಕರು ಮತ್ತು ಗ್ರಂಥಪಾಲಕರು ಮಾಡಿದ್ದರಲ್ಲದೆ, ವಿಕಿಪೀಡಿಯಾದಿಂದ ತನಗೆ ಯಾವ ಭಯವೂ ಇಲ್ಲ ಎಂದು ಬ್ರಿಟಾನಿಕಾ ಹೇಳಿದ್ದನ್ನು ಇಲ್ಲಿ ಸ್ಮರಿಸಬಹುಹು.

ಮೇಲಿನ ಅಧ್ಯಯನದ ಫಲಿತಾಂಶ ಪ್ರಕಟಣೆಯಿಂದ ನೇಚರ್ ಪತ್ರಿಕೆ ಮೇಲೆ ಕುಪಿತಗೊಂಡ ಬ್ರಿಟಾನಿಕ 30 ಮಂದಿ ತಜ್ಞರು ಮತ್ತು ಸಂಪಾದಕರುಗಳನ್ನೊಳಗೊಂಡ ಸಮಿತಿಯೊಂದನ್ನು ರಚಿಸಿ ಮೇಲಿನ ಫಲಿತಾಂಶಗಳನ್ನು ಮರುಅಧ್ಯಯನಕ್ಕೆ ಒಳಪಡಿಸಿತು. ಈ ಸಮಿತಿಯ ಇಪ್ಪತ್ತು ಪುಟಗಳ ವರದಿ ನೇಚರ್ ನಡೆಸಿದ ಸಮೀಕ್ಷೆಯನ್ನು ಪೂರ್ವಗ್ರಹಪೀಡಿತ, ಅಸ್ಪಷ್ಟ, ಜಾರಿಕೊಳ್ಳುವ ಮತ್ತು ದಾರಿತಪ್ಪಿಸುವ ಪ್ರಯತ್ನ ಎಂದು ಹೇಳಿ ಸಂಪೂರ್ಣ ತಿರಸ್ಕರಿಸಿ, ನೇಚರ್ ತನ್ನ ಅಧ್ಯಯನದ ಫಲಿತಾಂಶ ಪ್ರಕಟಣೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಟೈಂಸ್ ಮತ್ತು ನ್ಯೂಯಾರ್ಕ್ ಟೈಂಸ್ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಣೆ ನೀಡಿತಲ್ಲದೆ ತನ್ನ ವೆಬ್‌ಸೈಟ್‌ನಲ್ಲೂ ಪ್ರಕಟಿಸಿತು. ಈ ವರದಿಯಲ್ಲಿ ನೇಚರ್ ನಿಯಮಿಸಿದ ವಿದ್ವಾಂಸರ ಅಧ್ಯಯನ ಅಸಂಬದ್ಧ ಮತ್ತು ದೋಷಪೂರಿತ ಎಂದು ವಾದಿಸಿದ ಬ್ರಿಟಾನಿಕ, ಲೇಖನಗಳ ಆಯ್ಕೆಯಲ್ಲಿಯೇ ಎಡವಲಾಗಿದೆ, ಕೆಲವು ಲೇಖನಗಳನ್ನು ಬ್ರಿಟಾನಿಕ ಪ್ರಕಟಿಸಿಯೇ ಇಲ್ಲ, ಬಾಗಶಃ ಲೇಖನಗಳನ್ನು ಪರಿಶೀಲಿಸಲಾಗಿದೆ, ಲೇಖನಗಳ ಶೀರ್ಷಿಕೆ ಮತ್ತು ತಲೆಬರಹಗಳನ್ನಾಧರಿಸಿ ಪರಿಗಣಿಸಿದ ತಪ್ಪುಗಳು ಸತ್ಯದೂರವಾದುವು, ತಪ್ಪು ಎಂದು ಪರಿಗಣಿಸಿದವುಗಳನೇಕ ತಜ್ಞರ ವೈಯಕ್ತಿಕ ಅಭಿಪ್ರಾಯಗಳು ಎಂದು ತಿಳಿಸಿ ನಿರ್ದಿಷ್ಟವಾದ ಗುಣದ ಕೊರತೆಯೇನೆಂದು ನೇಚರ್ ಅನ್ನು ಪ್ರಶ್ನಿಸಿತು.

ಪ್ರತ್ಯುತ್ತರವೀಯುತ್ತ ನೇಚರ್ ಮೇಲಿನ ಬ್ರಿಟಾನಿಕ ಸಮಿತಿಯ ಆರೋಪಗಳಲ್ಲಿ ಹುರುಳಿಲ್ಲ ಎಂದು ತಿರಸ್ಕರಿಸಿ ಅಧ್ಯಯನದ ಪೂರ್ಣ ಹಿನ್ನೆಲೆ ಮತ್ತು ಮಾಹಿತಿಯನ್ನು ಮತ್ತೆ ಪ್ರಕಟಿಸಿತು. ಅಧ್ಯಯನ ನಡೆಸಿದ ವಿದ್ವಾಂಸರು ಪೂರ್ಣ ಸ್ವತಂತ್ರರು. ಬ್ರಿಟಾನಿಕ ಯಾವುದೇ ರೀತಿಯ ನೇರ ಸಂಪರ್ಕ ಅಥವಾ ಚರ್ಚೆ ನಡೆಸಿಲ್ಲ, ಕೆಲವು ವಿಷಯಗಳ ಲೇಖನಗಳನ್ನು ಬ್ರಿಟಾನಿಕಾ ವಿಶ್ವಕೋಶದಲ್ಲಿ ದೊರೆಯದಿದ್ದಾಗ ಬ್ರಿಟಾನಿಕಾದ ಸಹಪ್ರಕಟಣೆಗಳಾದ ವಿದ್ಯಾರ್ಥಿ ವಿಶ್ವಕೋಶ ಮತ್ತು 'ಬುಕ್ ಆಫ್ ದಿ ಇಯರ್' ನಿಂದ ಪಡೆಯಲಾಗಿದೆ ಎಂದು ತಿಳಿಸಿತು. ಈ ಅಧ್ಯಯನ ವೆಬ್ ಸೈಟುಗಳ ಮಾಹಿತಿಯನ್ನು ಹೋಲಿಸುವ ಪ್ರಯತ್ನ ಮಾತ್ರ ಹಾಗೂ ವಿದ್ವಾಂಸರುಗಳಿಗೆ ಈ ಲೇಖನಗಳನ್ನು ಯಾವ ವಿಶ್ವಕೋಶದಿಂದ ಆರಿಸಿದೆ ಎಂಬುದನ್ನು ಗೌಪ್ಯವಾಗಿಡಲಾಗಿತ್ತು ಎಂದೂ ಪುನರುಚ್ಚರಿಸಿತು. ವಿಚಿತ್ರವೆಂದರೆ ವಿಕಿಪೀಡಿಯಾ ಮತ್ತು ಬ್ರಿಟಾನಿಕಗಳೆರೆಡೂ ನೇಚರ್ ಪಟ್ಟಿ ಮಾಡಿದ ಎಲ್ಲಾ ತಪ್ಪುಗಳನ್ನೂ ಕೂಡಲೇ ಸರಿಪಡಿಸಿವೆ. ಈ ವಿವಾದ ಪ್ರಸ್ತುತ ವಿಜ್ಞಾನ ಪತ್ರಿಕೆಗಳು ಮತ್ತು ಇಂಟರ್‌ನೆಟ್‌ನಲ್ಲಿ ಚರ್ಚೆಗೆ ಗ್ರಾಸವಾಗಿದೆ. ಹಲವರು ಇವೆರೆಡೂ ಸಂಪೂರ್ಣ ಭಿನ್ನ ಪರಾಮರ್ಶನ ಮೂಲಗಳು, ಅವುಗಳ ಹೋಲಿಕೆಯೇ ಅಸಂಬದ್ಧ ಎಂದಿದ್ದಾರೆ. ನಿಖರ, ಸಂಕ್ಷಿಪ್ತ ಮತ್ತು ನಂಬಲರ್ಹ ಮಾಹಿತಿಗೆ ಬ್ರಿಟಾನಿಕಾ ಮತ್ತು ತತ್‌ಕ್ಷಣದ ಸ್ಥೂಲ ಪುಕ್ಕಟೆ ಮಾಹಿತಿಗೆ ವಿಕಿಪೀಡಿಯಾ ಆಗಬಹುದು ಎನ್ನುವ ಅಭಿಪ್ರಾಯ ಕೆಲವರದು. ಇನ್ನು ಕೆಲವರು ಬ್ರಿಟಾನಿಕಾದಲ್ಲಿ ಓದಿದ್ದೇನೆ ಅದೇ ಸರಿ ಎಂಬ ಕಾಲ ಮುಗಿಯಿತು ಎಂದರೆ, ಹತ್ತು ಲಕ್ಷ ಲೇಖನಗಳನ್ನು (ಇಂಗ್ಲೀಷಿನಲ್ಲಿ) ಹೊಂದಿರುವ ವಿಕಿಪೀಡಿಯಾ ಇನ್ನೂ ಬಹಳಷ್ಟು ಸುಧಾರಿಸಬೇಕು ಎನ್ನುವ ಅಭಿಪ್ರಾಯ ಕೆಲವರದು.

ವಿಕಿಪೀಡಿಯಾ ಲೇಖನದಲ್ಲಿ ಸರಾಸರಿ ನಾಲ್ಕು ತಪ್ಪುಗಳಿದ್ದರೆ ಬ್ರಿಟಾನಿಕಾ ಲೇಖನದಲ್ಲಿ ಮೂರು ತಪ್ಪುಗಳಿದ್ದು, ಸಾಂಪ್ರದಾಯಿಕ ಖ್ಯಾತ ವಿಶ್ವಕೋಶವೊಂದರ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದಂತಾಗಿದೆ. ಸಾಮಾನ್ಯವಾಗಿ ಸಂಪಾದಕತ್ವ ಮತ್ತು ಪರಿಷ್ಕರಣೆಗೆ ಒಳಪಡುವ ಸಾಂಪ್ರದಾಯಿಕ ವಿಶ್ವಕೋಶದ ಲೇಖನಗಳು ಎಲ್ಲವನ್ನೂ ಕೂಡಿ ಹಾಕುವ ಪ್ರವೃತ್ತಿಯಿರುವ ವಿಕಿಪೀಡಿಯಾ ಲೇಖನಗಳಿಗಿಂತ ಸಂಕ್ಷಿಪ್ತವಾಗಿರುವುದರಿಂದ ವಿದ್ವಾಂಸರು ಕೆಲವು ಮಾಹಿತಿ ಇಲ್ಲ ಎಂಬ ತೀರ್ಮಾನಕ್ಕೆ ಬಂದಿರಬಹುದಾಗಿದೆ. ಬ್ರಿಟಾನಿಕಾದ ಮೇಲೆ ತಿಳಿಸಿದ ಇತರ ಪರಾಮರ್ಶನ ಗ್ರಂಥಗಳಿಂದಾಯ್ದ ಲೇಖನಗಳನ್ನು ಹೊರತುಪಡಿಸಿದರೂ ಬ್ರಿಟಾನಿಕಾ ವಿಶ್ವಕೋಶ ವಿಕಿಪೀಡಿಯಾದ ಅರ್ಧದಷ್ಟು ತಪ್ಪುಗಳನ್ನು ಹೊಂದಿದೆ. ಅಂತಿಮವಾಗಿ ವಿಕಿಪೀಡಿಯಾ ಉತ್ಕೃಷ್ಟವಲ್ಲವಾದರೂ ಒಂದು ಒಳ್ಳೆಯ ಬಹುಪಯೋಗಿ ಪ್ರಯತ್ನ ಎನ್ನಬಹುದು. ಲೇಖನ ಯಾರು ಬರೆದರು ಅನ್ನುವುದಕ್ಕಿಂತ ಅದರ ಗುಣಮಟ್ಟ ಮುಖ್ಯವಾಗುತ್ತದೆ. ಅಲ್ಲದೆ ಸಾಮಾನ್ಯರ ಬರವಣಿಗೆ ವಿಕಿಪೀಡಿಯಾದ ಮೂಲಕ ವಿಜ್ಞಾನಿಗಳಿಗೆ ಹೊಸ ಹೊಳಹುಗಳನ್ನು ತೋರಿಸಿದ ಉದಾಹರಣೆಗಳಿವೆ. ವಿಕಿಪೀಡಿಯಾ ನಿರ್ಮಾಣದಲ್ಲಿ ಅನೇಕ ತೊಡಕುಗಳಿವೆ. ಕಿಡಿಗೇಡಿಗಳ ತೊಂದರೆಯಿಂದಾಗಿ ತಜ್ಞರೂ ಕೂಡ ದೋಷ ಪರಿಹರಿಸಲು ಹೆಚ್ಚು ಕಾಲ, ಶ್ರಮ ವ್ಯಯಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಿಕಿಪೀಡಿಯಾ ಈಗಾಗಲೇ ಕೆಲವು ಸಂರಕ್ಷಣಾ

ನಿಯಮಗಳನ್ನು ರೂಪಿಸಿ, ಕೆಲವು ನಿಟ್ಟಿನಿಂದ ವಿರೋಧವಿದ್ದರೂ, ಎಲ್ಲ ಪುಟಗಳನ್ನೂ ಎಲ್ಲರೂ ಬದಲಿಸದಂತೆ ಮಾಡಲಾಗಿದೆ. ಈ ವಿವಾದ ಇತರ ಭಾಷಾ ವಿಕಿಪೀಡಿಯಾಗಳಿಗೆ ಮುನ್ನೆಚ್ಚರಿಕೆಯಾಗಬೇಕು. ಸೈದ್ಧಾಂತಿಕವಾಗಿ ವಿಕಿಪೀಡಿಯಾಕ್ಕೆ ಲೇಖನ ಬರೆಯಲು, ಸಂಪಾದಿಸಲು ಮತ್ತು ಪರಿಷ್ಕರಿಸಲು ಭಾಷೆ ಬಲ್ಲ ಎಲ್ಲ ತಜ್ಞರು ಮತ್ತು ವಿದ್ವಾಂಸರು ಭಾಗಿಗಳಾಗಬಹುದಾದರೂ ವಾಸ್ತವದಲ್ಲಿ ಒಂದು ವಿಶ್ವಕೋಶ ಸಂಪಾದಕ ಮಂಡಳಿಯ ಸದಸ್ಯತ್ವದ ಮಟ್ಟದ ತಜ್ಞ ವಿದ್ವಾಂಸರೆಷ್ಟು ಮಂದಿ ವಿಕಿಪೀಡಿಯಾ ಬೆಳೆಸಲು ಮುಂದಾಗಿದ್ದಾರೆ ಎಂಬ ಪ್ರಶ್ನೆ ಏಳುತ್ತದೆ. ಇಂತಹ ಹಿನ್ನೆಲೆಯಲ್ಲಿ ವಿಕಿಪೀಡಿಯಾ ಗುಣಮಟ್ಟ ಕಾಯ್ದುಕೊಳ್ಳುವುದೆಂತು?. ಕನ್ನಡ ವಿಕಿಪೀಡಿಯಾ ಮಟ್ಟಿಗೆ ಹೇಳುವುದಾದರೆ ನಾವಿನ್ನೂ 300 ಹವ್ಯಾಸಿ ಲೇಖಕರ 1300 ಲೇಖನಗಳನ್ನಿಟ್ಟುಕೊಂಡು ಬಹಳ ಹಿಂದಿದ್ದೇವೆ. ಆದರೆ ನಿರಾಶರಾಗದೇ ಈ ಸುವರ್ಣಾವಕಾಶ ಬಳಸಿಕೊಕೊಂಡು ಮುಕ್ತ ಕನ್ನಡ ವಿಶ್ವಕೋಶ, ಮುಕ್ತ ಕನ್ನಡ ನಿಘಂಟು ಇತ್ಯಾದಿ ವಿಕಿಪೀಡಿಯಾ ಯೋಜನೆಗಳಲ್ಲಿ ಭಾಗಿಯಾಗಿ, ಮುದ್ರಿತ ವಿಶ್ವಕೋಶ ಮತ್ತು ನಿಘಂಟುಗಳನ್ನು CD-ROM ರೂಪದಲ್ಲಿ ಪ್ರಕಟಿಸುವ ಬದಲು ಕನ್ನಡ ವಿಕಿಪೀಡಿಯ ಮತ್ತು ವಿಕ್ಷನರಿಗಳನ್ನು ಬಲ ಪಡಿಸಿದರೆ ಇಂಟರ್‌ನೆಟ್ ಮೂಲಕ ಹೆಚ್ಚು ಓದುಗರನ್ನು ತಲುಪಬಹುದಾಗಿದೆ. ನಮ್ಮಲ್ಲಿ ಪಠ್ಯವಷ್ಟೆ ಅಲ್ಲದೆ ಅಪರೂಪದ ಧ್ವನಿ ಮುದ್ರಿಕೆ, ಸ್ಥಿರ ಹಾಗು ವೀಡಿಯೊ ಚಿತ್ರ ಇತ್ಯಾದಿಗಳಿಗೆ ಒಂದು ಸಮಗ್ರ ಸೂಚಿಯಿಲ್ಲ. ಅವು ಯಾರ (ಯಾವ ಸಂಸ್ಥೆ/ ಇಲಾಖೆ) ಬಳಿ ಇವೆ ಇಂಬುದೂ ತಿಳಿಯದು. ಅವುಗಳಲ್ಲಿ ಕಾಪಿರೈಟ್‌ಗೆ ಒಳಪಡದ್ದನ್ನ ಹಾಗೂ ಕಾಪಿರೈಟ್ ಮುಕ್ತಗೊಳಿಸಬಹುದಾದ್ದನ್ನು Wikimedia Commons ನಲ್ಲಿ ಸೇರಿಸಿ ಎಲ್ಲರೂ ಕೇಳಲು ಮತ್ತು ವೀಕ್ಷಿಸಲು ಸಾಧ್ಯವಾಗಿಸಬಹುದು. ಸಾರ್ವಜನಿಕ ಗ್ರಂಥಾಲಯಗಳು ಮತ್ತು ಶಾಲಾ ಗ್ರಂಥಾಲಯಗಳು ದುಬಾರಿ ಪರಾಮರ್ಶನ ಗ್ರಂಥಗಳ ಸಗಟು ಖರೀದಿಗೆ ಬದಲು ಇಂಟರ್‌ನೆಟ್ ಸೌಲಭ್ಯ ಕಲ್ಪಿಸಿ, ಪುಕ್ಕಟೆ ಲಭ್ಯವಿರುವ ವಿಕಿಪೀಡಿಯಾದಂತಹ ನೂರಾರು ಪರಾಮರ್ಶನ ಗ್ರಂಥಗಳನ್ನು ಬಳಸುವುದು ಸೂಕ್ತ.

**ಡಾ॥ ಎಂ. ಎಸ್. ಶ್ರೀಧರ್**

**e-mail**: sridharmirle@yahoo.com

---

**ವಿಳಾಸ :** ಫ್ಲಾಟ್ ೨ಸಿ, ಅಂತರಿಕ್ಷ ಅಪಾರ್ಟ್‌ಮೆಂಟ್, ನಂ. ೧೦೧/ ೫, ೧೧ನೆ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–೫೬೦೦೦೩

**ದೂರವಾಣಿ :** ೨೩೩೧೩೧೧/ ೯೮೪೫೬–೨೯೪೨೪